**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡ ಇವರು ನಿಯಮ-72ರಡಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರಿಸುವ ಬಗ್ಗೆ**

**ಪ್ರಶ್ನೆ:**

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿಯಲ್ಲಿನ ರೈತರಿಗೆ ಅನುಕೂಲಕರವಾದ ಕಂದಾಯ ಅದಾಲತ್ ಕಾರ್ಯಗಳನ್ನು ನಿಖರವಾಗಿ ನಡೆಸದೇ ಇರುವ ಬಗ್ಗೆ ಹಾಗೂ ಪಹಣಿ ತಿದ್ದುಪಡಿ, ಪೋಡಿ ಇತ್ಯಾದಿ ರೈತರ ಕೆಲಸಗಳು ಆಗುವಲ್ಲಿ ಉಂಟಾಗಿರುವ ತೊಂದರೆ ಮತ್ತು ಕಂದಾಯ ಇಲಾಖೆಯ ಲೋಪದೋಷಗಳ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**ಉತ್ತರ:**

ಕಂದಾಯ ಅದಾಲತ್ ಅಂದೋಲನದ ಅವಧಿ ವಿಸ್ತರಣೆ ಅವಶ್ಯಕತೆ ಇರುವುದಿಲ್ಲವೆಂದು ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರು ದಿನಾಂಕ:21.03.2020 ರ ಪತ್ರದಲ್ಲಿ ಮಾಹಿತಿ ಸಲ್ಲಿಸಿರುವುದರಿಂದ, ಸರ್ಕಾರದ ಆದೇಶ ಸಂಖ್ಯೆ:ಕಂಇ 65 ಎಂಆರ್‌ಆರ್ 2020 ದಿನಾಂಕ:16.06.2020 ಮತ್ತು ದಿನಾಂಕ: 09.03.2021 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಹೊರತುಪಡಿಸಿ ಆದೇಶಿಸಲಾಗಿರುವುದರಿಂದ ನೆಲಮಂಗಲ ತಾಲ್ಲೂಕಿನಲ್ಲಿ ಕಂದಾಯ ಅದಾಲತ್ ನಡೆಸಲು ತಹಶೀಲ್ದಾರರವರಿಗೆ ಅಧಿಕಾರ ಇರುವುದಿಲ್ಲ.

ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿಯಲ್ಲಿ 70 ಕಂದಾಯ ಗ್ರಾಮಗಳಿದ್ದು, ಪ್ರತಿ ಮಾಹೆಯ 01ನೇ ಶನಿವಾರ ನಿಖರವಾಗಿ ಪಹಣಿ ತಿದ್ದುಪಡಿ ಅದಾಲತ್‌ಗಳನ್ನು ನಡೆಸಲಾಗುತ್ತಿರುತ್ತದೆ. ಸೋಂಪುರ ಹೋಬಳಿಗೆ ಸಂಬಂಧಿಸಿದಂತೆ, ಇದುವರೆಗೂ 09 ಪಹಣಿ ತಿದ್ದುಪಡಿ ಅದಾಲತ್ ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, ಸ್ವೀಕೃತಿಯಾದ ಅರ್ಜಿಗಳಿಗೆ ಕಡತ ಸಿದ್ಧಪಡಿಸಿ, ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸಿ ಅನುಮೋದನೆ ಪಡೆದು ಕ್ರಮವಹಿಸಲಾಗುತ್ತದೆ. ಅದರಂತೆ ಜನವರಿ 2021ರಲ್ಲಿ 981 ಪ್ರಕರಣಗಳು ಬಾಕಿ ಇದ್ದು, ತಿದ್ದುಪಡಿ ಅದಾಲತ್ ಕಾರ್ಯಕ್ರಮದಲ್ಲಿ 232 ಪ್ರಕರಣಗಳನ್ನು ತಿದ್ದುಪಡಿ ಮಾಡಿ ಗಣಕೀಕರಣ ಮಾಡಲಾಗಿರುತ್ತದೆ. ಹಾಲಿ ಸೋಂಪುರ ಹೋಬಳಿಯಲ್ಲಿ 749 ಪ್ರಕರಣಗಳು ತಿದ್ದುಪಡಿಯಾಗಬೇಕಾಗಿದ್ದು, ಅದರಲ್ಲಿ ಬಹುತೇಕ ಪ್ರಕರಣಗಳು ಸಿವಿಲ್ ನ್ಯಾಯಲಯಗಳಲ್ಲಿ ದಾಖಲಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳಲ್ಲಿ ಕೆಲವು ಸರ್ಕಾರಿ ಜಮೀನುಗಳಾಗಿದ್ದು, ಇನ್ನುಳಿದ ಜಮೀನುಗಳಲ್ಲಿನ ಕೆಲವು ರೈತರು ನ್ಯಾಯಲಯದಲ್ಲಿ ಮೇಲ್ಮನವಿ ದಾಖಲಿಸಿರುವುದರಿಂದ, ಅಂತಹ ಪ್ರಕರಣಗಳನ್ನು ಪಹಣಿಯಲ್ಲಿ ತಿದ್ದುಪಡಿ ಮಾಡಲು ಸಾಧ್ಯವಾಗಿರುವುದಿಲ್ಲ. ಇದನ್ನು ಹೊರತುಪಡಿಸಿ ಉಳಿದ ತಿದ್ದುಪಡಿ ಪ್ರಕರಣಗಳನ್ನು ಸಕ್ಷಮ ಪ್ರಾಧಿಕಾರದಿಂದ ಆದೇಶ ಪಡೆದು ಹಂತ ಹಂತವಾಗಿ ಇತ್ಯರ್ಥ ಪಡಿಸಲು ಕ್ರಮವಹಿಸಲಾಗುತ್ತಿದೆ.

ಸೋಂಪುರ ಹೋಬಳಿಯಲ್ಲಿ ದರಖಾಸ್ತು ಪೋಡಿ ದುರಸ್ತಿಪಡಿಸಲು ಕೋರಿ ಸ್ವೀಕೃತಿಯಾದ 638 ಅರ್ಜಿಗಳನ್ನು ಇತ್ಯರ್ಥಪಡಿಸಿ, ಗಣಕೀಕರಣ ಮಾಡಲಾಗಿರುತ್ತದೆ.

ಕಂಇ 113 ಎಂಆರ್‌ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು